ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magzine*

ಸಂಪುಟ 4 ಸಂಚಿಕೆ 23 ನವೆಂಬರ್ 2019




ಮೈಸೂರಿನ ವರುಣ ಗ್ರಾಮದ ಹತ್ತಿರ ನೆರವೇರಿದ ರಾಜೇಂದ್ರ ಶ್ರೀಗಳವರ ೧೦೪ನೆಯ ಜಯಂತಿ ಸಂದರ್ಭದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ನೂತನ ಸಮುಚ್ಚಯ ಶಿಲಾನ್ಯಾಸವನ್ನು ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀ ರಾಮ್ ನಾಥ್ ಕೋವಿಂದ್‌ರವರು ನೆರವೇರಿಸುತ್ತಿರುವುದು. ಚಿತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳು, ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ಶ್ರೀಮತಿ ಸವಿತಾ ಕೋವಿಂದ್, ಶ್ರೀ ಡಿ.ವಿ. ಸದಾನಂದಗೌಡ, ಶ್ರೀ ವಜೂಭಾಯಿ ರೂಡಭಾಯಿ ವಾಲಾ ಹಾಗೂ ಶ್ರೀ ವಿ. ಸೋಮಣ್ಣನವರು



ಮೈಸೂರಿನ ಬಳಿ ವರುಣದಲ್ಲಿ ರಾಜೇಂದ್ರ ಶ್ರೀಗಳವರ ೧೦೪ನೆಯ ಜಯಂತಿ ಹಾಗೂ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ನೂತನ ಸಮುಚ್ಚಯ ಶಿಲಾನ್ಯಾಸ ಕಾರ್ಯಕ್ರಮವನ್ನು ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀ ರಾಮ್ ನಾಥ್ ಕೋವಿಂದ್‌ರವರು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಡಿ.ವಿ. ಸದಾನಂದಗೌಡ, ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ಪರಮಪೂಜ್ಯ ಜಗದ್ಗುರುಗಳು, ಶ್ರೀಮತಿ ಸವಿತಾ ಕೋವಿಂದ್, ಶ್ರೀ ವಜೂಭಾಯಿ ರೂಡಭಾಯಿ ವಾಲಾ, ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಹಾಗೂ ಶ್ರೀ ವಿ. ಸೋಮಣ್ಣನವರು



ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಜೀವತಂತ್ರಜ್ಞಾನ ವಿಭಾಗದ ವತಿಯಿಂದ ಏರ್ಪಡಿಸಿದ್ದ 'ಉದ್ಯಮದಲ್ಲಿ 4.0 ಕ್ರಾಂತಿಯ ಅಳವಡಿಕೆ ಮತ್ತು ಜೀವವಿಜ್ಞಾನದಲ್ಲಿ ಬಯೋ ಇಮೇಜಿಂಗ್ ಪ್ರವೃತ್ತಿಗಳು ಹಾಗೂ ಅನ್ವಯಿಕೆಗಳು' ಎಂಬ ವಿಷಯ ಕುರಿತ ಕಾರ್ಯಗಾರವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಲಾ ಯಿತು. ಚಿತ್ರದಲ್ಲಿ ಪ್ರೊ. ಮಹೇಶನ್, ಡಾ. ಎಂ.ಎನ್. ನಾಗೇಂದ್ರಪ್ರಸಾದ್, ಡಾ. ಬೆನ್ ಲೋಸ್, ಪ್ರೊ. ಬಿ. ಸುರೇಶ್, ಡಾ. ಆ್ಯಂಡ್ರೆ ಟೋಯಿಟ್, ಡಾ. ಟಿ.ಎನ್. ನಾಗಭೂಷಣ್, ಡಾ. ಎಸ್. ನಂಜುಂಡ ಸ್ವಾಮಿ, ಪ್ರೊ. ಕೆಂಪರಾಜು ಮತ್ತು ಡಾ. ರೆನ್ನ್ಸ್ ಥಿಯಾರ್ಟ್‌ರವರು



ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ನಡೆದ ಬೆಳದಿಂಗಳ ಸಂಗೀತ -217 ಕಾರ್ಯಕ್ರಮದಲ್ಲಿ ವಿದ್ವಾನ್ ಅಭಿರಾಮ್ ಬೋಡೆ ಗಾಯನ ಪ್ರಸ್ತುತ ಪಡಿಸುತ್ತಿರುವುದು. ವಿದ್ವಾನ್ ವೈಭವ್ ರಮಣಿ (ವಯೊಲಿನ್) ಮತ್ತು ವಿದ್ವಾನ್ ಎ. ರಾಧೇಶ್ (ಮೃದಂಗ) ಪಕ್ಕವಾದ್ಯ ಸಹಕಾರ ನೀಡಿದರು

# ಸಮರ್ಪಕ ಚಿಕಿತ್ಸೆಗೆ ಎಲ್ಲ ಪದ್ಧತಿಗಳ ಜ್ಞಾನವೂ ಅವಶ್ಯ



- ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ನೂತನ ಆವರಣದಲ್ಲಿ ಶಿಲಾನ್ಯಾಸ ನೆರವೇರಿಸಲು ನಾನಿಲ್ಲಿರುವುದು ನನಗೆ ಸಂತಸವನ್ನು ತಂದಿದೆ. ಪರಮಪೂಜ್ಯರ ಮತ್ತು ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯ ಈ ಸಮಾರಂಭವನ್ನು ಇನ್ನೂ ವಿಶೇಷವಾಗಿಸಿದೆ. ಇದಲ್ಲದೆ, ನಾವು ಶ್ರೀ ಸುತ್ತೂರು ಮಠಕ್ಕೆ ತೀರಾ ಹತ್ತಿರದಲ್ಲಿದ್ದೇವೆ. ಹೀಗಾಗಿ ಅನುಗ್ರಹಿತ ಸ್ಥಳದಲ್ಲಿದ್ದೇವೆ.

- ಶ್ರೀ ಸುತ್ತೂರು ಮಠಕ್ಕೆ ಸಹಸ್ರ ವರ್ಷಗಳ ಇತಿಹಾಸವಿದೆ. ಶ್ರೀಮಠವು ನಿರಂತರವಾಗಿ ಆಧ್ಯಾತ್ಮಿಕ ಮೌಲ್ಯ ಮತ್ತು ಆದರ್ಶಗಳೊಂದಿಗೆ ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ಎತ್ತಿಹಿಡಿಯುವ ಆಂದೋಲನದ ಕೇಂದ್ರವಾಗಿದೆ. ಶ್ರೀಮಠದ ಇಪ್ಪತ್ತೂರನೆಯ ಜಗದ್ಗುರುಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು 1954ರಲ್ಲಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠವನ್ನು ಸ್ಥಾಪಿಸಿದರು. ಈ ಮಹಾವಿದ್ಯಾಪೀಠವು ಶ್ರೀಮಠದ ಎಲ್ಲ ಶಿಕ್ಷಣ ಸಂಸ್ಥೆಗಳನ್ನು ಮುನ್ನಡೆಸುತ್ತಿದೆ. ಇಲ್ಲಿ ಒಂದು ಲಕ್ಷಕ್ಕೂ ಮೀರಿದ ವಿದ್ಯಾರ್ಥಿಗಳನ್ನೊಳಗೊಂಡ 300ಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳಿವೆ ಎಂದು ಕೇಳಿದ್ದೇನೆ. ನನಗಿಂತ ಹಿಂದಿನ ರಾಷ್ಟ್ರಪತಿಗಳಾದ ಶ್ರೀ ಪ್ರಣಬ್ ಮುಖರ್ಜಿ, ಶ್ರೀಮತಿ ಪ್ರತಿಭಾ ಪಾಟೀಲ್ ಮತ್ತು ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರು ಮಹಾವಿದ್ಯಾಪೀಠದ ಕೆಲವು ಸಂಸ್ಥೆಗಳನ್ನು ಮತ್ತು ಸೌಲಭ್ಯಗಳನ್ನು ಉದ್ಘಾಟಿಸಿದ್ದಾರೆ.

- ನಿನ್ನೆಯ ದಿನ ನಾನು ಮೈಸೂರಿನಲ್ಲಿ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್‌ರವರ ಜನ್ಮಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದೆ. ಶ್ರೀ ಜಯಚಾಮರಾಜ ಒಡೆಯರ್‌ರವರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಾಮಾಜಿಕ ಕೊಡುಗೆಗಳನ್ನು ಗುರುತಿಸಿ 1953ರಲ್ಲಿ ಅವರಿಗೆ 'ರಾಜಗುರುತಿಲಕ' ಎಂಬ ಬಿರುದನ್ನು ನೀಡಿ ಗೌರವಿಸಿದರು ಎಂದು ಕೇಳಿದೆ. ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ಈ ಜಾಗತಿಕ ಮಟ್ಟದ ಕ್ಯಾಂಪಸ್ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ 104ನೆಯ ಜಯಂತಿ ಮಹೋತ್ಸವದ ಅತ್ಯುತ್ತಮ ಉಡುಗೊರೆ ಎಂದು ತಿಳಿಸಲು ಸಂತೋಷಿಸುತ್ತೇನೆ.

- ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಸುತ್ತೂರು ಶ್ರೀಮಠದ ಶೈಕ್ಷಣಿಕ ಆದ್ಯತೆಗಳನ್ನು ಪ್ರಬಲವಾಗಿ ಪ್ರೋತ್ಸಾಹಿಸುತ್ತಿದ್ದಾರೆ. ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯು 2008ರಲ್ಲಿ ಸ್ಥಾಪನೆಯಾಗಿದ್ದು, ಇಂದು ಆರೋಗ್ಯವಿಜ್ಞಾನ ಕ್ಷೇತ್ರದ ಪ್ರತಿಷ್ಠಿತ ಸಂಸ್ಥೆಯೆಂದು ಪರಿಗಣಿತವಾಗಿದೆ. 2018ರಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ದೇಶದ 957 ವಿಶ್ವವಿದ್ಯಾಲಯಗಳ ಶ್ರೇಣಿಯಲ್ಲಿ ಜೆಎಸ್‌ಎಸ್ ಅಕ್ಯಾಡೆಮಿಯನ್ನು 37ನೆಯ ಕ್ರಮಾಂಕದಲ್ಲಿ ಗುರುತಿಸಿದೆ. 2019ರಲ್ಲಿ ದಿ ಟೈಮ್ಸ್ ಹೈಯರ್ ಎಜುಕೇಶನ್ ಎಮರ್ಜಿಂಗ್ ಎಕನಾಮಿಕ್ಸ್ ವಿಶ್ವವಿದ್ಯಾಲಯವು 64ನೆಯ ಕ್ರಮಾಂಕದಲ್ಲಿ

---

* ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀ ರಾಮ್ ನಾಥ್ ಕೋವಿಂದ್‌ರವರು 11.10.2019 ರಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ವರುಣ ಕ್ಯಾಂಪಸ್‌ನಲ್ಲಿ ನೂತನ ಸಂಕೀರ್ಣಕ್ಕೆ ಶಿಲಾನ್ಯಾಸ ನೆರವೇರಿಸಿ ಮಾಡಿದ ಭಾಷಣ

ಗುರುತಿಸಿದೆ. ಈ ಸಾಧನೆಗಾಗಿ ಆಡಳಿತ ವರ್ಗದವರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

- ಜೆಎಸ್‌ಎಸ್ ಅಕ್ಯಾಡೆಮಿಯ ಈ ಜಾಗತಿಕ ಕ್ಯಾಂಪಸ್ ನಿರ್ಮಾಣದಿಂದ ಮಹಾವಿದ್ಯಾಪೀಠವು ಶೈಕ್ಷಣಿಕ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಕೊಡುಗೆ ನೀಡಲು ಅನುಕೂಲವಾಗುತ್ತದೆ ಎಂಬ ವಿಶ್ವಾಸ ನನಗಿದೆ. ನೂರು ಎಕರೆಗೂ ಮಿಕ್ಕ ಈ ಹೊಸ ಕ್ಯಾಂಪಸ್ಸಿನಲ್ಲಿ ಸಕಲ ಸೌಲಭ್ಯಗಳು ಮತ್ತು ಕಟ್ಟಡಗಳು ಇರುತ್ತವೆಂದು ಕೇಳಿದ್ದೇನೆ. ಶೇ.70ಕ್ಕಿಂತಲೂ ಹೆಚ್ಚು ಭಾಗ ಹಸಿರನ್ನು ಹೊಂದಿರುವ ಪರಿಸರಸ್ನೇಹಿ ಲಕ್ಷಣಗಳನ್ನೊಳಗೊಂಡ 'ಹಸಿರು ಕ್ಯಾಂಪಸ್' ಯೋಜನೆ ಹಮ್ಮಿಕೊಂಡಿದ್ದಕ್ಕಾಗಿ ಅಭಿನಂದಿಸುತ್ತೇನೆ. ಈ ಬಗೆಯ ಪರಿಸರ ಸಂಬಂಧಿ ಕಾಳಜಿಯನ್ನು ತೋರುತ್ತಿರುವ ಎಲ್ಲರಿಗೂ ಶುಭಕಾಮನೆಗಳು.

- ಈ ನೂತನ ಕ್ಯಾಂಪಸ್ ಆರೋಗ್ಯ ಮತ್ತು ಜೀವವಿಜ್ಞಾನ ವಿಷಯ ಕೇಂದ್ರಿತವಾದ ಹೊಸ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅವಕಾಶ ಮಾಡಿಕೊಡಲಿದೆ. ಆರೋಗ್ಯ ನಿರ್ವಹಣೆ, ಔಷಧವಿಜ್ಞಾನ, ಜೀವ–ವೈದ್ಯಕೀಯ ಶಾಸ್ತ್ರಗಳು, ಮನೋವಿಜ್ಞಾನ ಮತ್ತು ಮಾನವ ವರ್ತನೆಗಳು, ಯೋಗ, ಭಾರತೀಯ ವೈದ್ಯ ಪದ್ಧತಿ ಮುಂತಾದ ವಿಷಯಗಳನ್ನು ಒಳಗೊಳ್ಳಲಿದೆ. ಈ ಎಲ್ಲ ಅಧ್ಯಯನ ಕ್ಷೇತ್ರಗಳು ನಮ್ಮ ಬದುಕಿನ ಯೋಗ ಕ್ಷೇಮ ಮತ್ತು ಆರೋಗ್ಯಕ್ಕೆ ಒಂದಲ್ಲ ಒಂದು ಬಗೆಯಲ್ಲಿ ಸಂಬಂಧಿಸಿವೆ. ಈ ಕ್ಯಾಂಪಸ್ಸಿನಲ್ಲಿ ರೂಪುಗೊಳ್ಳುವ ಪರಿಣತರು ದೇಶದಲ್ಲಿ 'ಎಲ್ಲರಿಗೂ ಆರೋಗ್ಯ' ಮತ್ತು 'ಸಮಗ್ರ ಆರೋಗ್ಯ' ಯೋಜನೆಗಳ ನಮ್ಮ ಆಶಯವನ್ನು ನೆರವೇರಿಸುವರು ಎಂಬ ವಿಶ್ವಾಸ ನನಗಿದೆ. ಈಗ ಜಗತ್ತಿನೆಲ್ಲೆಡೆ ಯೋಗವನ್ನು ಕುರಿತಂತೆ ತೀವ್ರವಾದ ಆಸಕ್ತಿ ಇದೆ. ವಿದೇಶಗಳಲ್ಲೂ ಭಾರತೀಯ ವೈದ್ಯಪದ್ಧತಿ ಸ್ವೀಕಾರಾರ್ಹತೆಯನ್ನು ಪಡೆಯುತ್ತಿದೆ. ಇದು ಇಲ್ಲಿನ ವಿದ್ಯಾರ್ಥಿಗಳಿಗೆ ಭಾರತದ ಹೊರಗೂ ಅವಕಾಶಗಳ ಬಾಗಿಲುಗಳನ್ನು ತೆರೆಯುತ್ತಿದೆ.

- ಇಲ್ಲಿ ಸಮಾವೇಶಗೊಂಡಿರುವವರಲ್ಲಿ ವೈದ್ಯಕೀಯ ಕ್ಷೇತ್ರವೂ ಸೇರಿದಂತೆ ಆರೋಗ್ಯಸಂಬಂಧಿ ವಿಷಯಗಳನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳೂ ಇದ್ದೀರಿ ಎಂದು ಕೇಳಿದೆ. ನೀವೆಲ್ಲರೂ ಆರೋಗ್ಯವಂತ ಗ್ರಾಮ, ಪಟ್ಟಣ, ನಗರ, ರಾಜ್ಯ ಮತ್ತು ನಿಜವಾದ ಆರೋಗ್ಯವಂತ ಭಾರತವನ್ನು ನಿರ್ಮಿಸುವ ರೂವಾರಿಗಳಾಗಿದ್ದೀರಿ. ನಿಮ್ಮಲ್ಲಿ ಹಲವರು ಅಧ್ಯಯನದ ಭಾಗವಾಗಿ ಸಾಮಾಜಿಕ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿದ್ದೀರಿ ಎಂದು ತಿಳಿದಿದ್ದೇನೆ. ಸಾಮಾಜಿಕ ಸೇವೆಯ ಈ ಸ್ಫೂರ್ತಿಯನ್ನು ನೀವು ನಿಮ್ಮ ವೃತ್ತಿ ಹಾಗೂ ವೈಯಕ್ತಿಕ ಬದುಕಿನಲ್ಲಿಯೂ ಮುಂದುವರೆಸುವ ಬಗ್ಗೆ ನನಗೆ ನಂಬಿಕೆಯಿದೆ. ದೇಶವು ಸಶಕ್ತ ಯುವಜನತೆ, ಅದರಲ್ಲೂ ಮುಖ್ಯವಾಗಿ ಸುತ್ತೂರು ಶ್ರೀಮಠ ಹಾಗೂ ಮಹಾಸ್ವಾಮಿಗಳ ಸಂಸರ್ಗದಲ್ಲಿರುವ ಶಿಕ್ಷಣಸಂಸ್ಥೆಗಳ ವಿದ್ಯಾರ್ಥಿಗಳಿಂದ ಇದನ್ನು ನಿರೀಕ್ಷಿಸುತ್ತದೆ. ಮಹಾನ್ ಸಂತರಾದ ಶ್ರೀ ಬಸವೇಶ್ವರರು ಸ್ವಾರ್ಥವನ್ನು ಮೀರಿ ನೋಡುವುದನ್ನು ಮತ್ತು ಇತರರ ಸೇವೆ ಮಾಡುವದನ್ನು ನಮಗೆ ಕಲಿಸಿದ್ದಾರೆ. ಅವರ ಒಂದು ವಚನವನ್ನು ನಾನು ಉಲ್ಲೇಖಿಸುವೆ. 'ಸೋಹಂ ಎಂದೆನಿಸದೆ, ದಾಸೋಹಂ ಎಂದೆನಿಸಯ್ಯಾ'. ಇದನ್ನು ಸ್ಥೂಲವಾದ ಅರ್ಥದಲ್ಲಿ 'ಸ್ವಾರ್ಥಿಗಳಾಗದೆ ನಿಸ್ವಾರ್ಥಿಗಳಾಗಿರಿ' ಎಂದು ವ್ಯಾಖ್ಯಾನಿಸಬಹುದು.

- ಆರೋಗ್ಯದ ಕಾಳಜಿಯ ಬಗ್ಗೆ ಹೇಳುವುದಾದರೆ, ಇದುವರೆಗೆ ಬಹಳಷ್ಟನ್ನು ಸಾಧಿಸಿದ್ದೇವೆ. ಆದಾಗ್ಯೂ ಆರೋಗ್ಯ ದೇಶದ ಅಭಿವೃದ್ಧಿಗೆ ಇನ್ನೂ ಒಂದು ಸವಾಲಾಗಿಯೇ ಉಳಿದಿದೆ. ಸಾಂಕ್ರಾಮಿಕ, ಅಸಾಂಕ್ರಾಮಿಕ ಮತ್ತು ಹೊಸ ರೋಗ ಎಂಬ ಮೂರು ರೀತಿಯ ಸಮಸ್ಯೆಗಳಿಂದ ಬಳಲುತ್ತಿರುವ

ದೇಶ ನಮ್ಮದಾಗಿದೆ. ಅಪೌಷ್ಟಿಕತೆ ಮತ್ತು ನಿರ್ಲಕ್ಷಿತ ಪ್ರದೇಶಗಳಲ್ಲಿ ಹರಡುವ ರೋಗಗಳು ಅಭಿವೃದ್ಧಿಗೆ ಅಡ್ಡಿಯಾಗಿವೆ. ಆರೋಗ್ಯಸೇವೆಗಳನ್ನು ಸುಧಾರಿಸುವುದು ಸದ್ಯದ ಅಗತ್ಯವಾಗಿದೆ. ಕೇಂದ್ರ ಸರ್ಕಾರವು 'ಆಯುಷ್ಮಾನ್ ಭಾರತ'ದಂತಹ ಯೋಜನೆ ಮತ್ತು ಇತರ ಆರೋಗ್ಯ ಕಾರ್ಯಕ್ರಮಗಳ ಮೂಲಕ ರೋಗಗಳನ್ನು ನಿವಾರಿಸಲು ಕಟಿಬದ್ಧವಾಗಿದೆ. ಸ್ವಚ್ಛ ಭಾರತ ಮಿಷನ್ ಪ್ರಸಾರವೂ ಆರೋಗ್ಯದ ಗುರಿ ಸಾಧಿಸುವ ಯೋಜನೆ ಎಂದೇ ತಿಳಿದಿದ್ದೇನೆ. ನೈರ್ಮಲ್ಯ ಮತ್ತು ಶುಚಿತ್ವಗಳು ಆರೋಗ್ಯ-ಸಂಬಂಧಿ ಸಮಸ್ಯೆ ಮತ್ತು ರೋಗಗಳನ್ನು ಹೋಗಲಾಡಿಸಲು ಬೇಕಾಗುವ ಮೂಲ ಅಗತ್ಯಗಳಾಗಿವೆ. ಸ್ವಚ್ಛತೆ ಮತ್ತು ಆರೋಗ್ಯಕ್ಕಾಗಿ ದೇಶವ್ಯಾಪಿ ಆಂತರಿಕ ಕ್ರಾಂತಿ ಈಗಾಗಲೇ ನಡೆದಿದೆ. ಅದು ಮುಂದುವರಿಯಬೇಕು ಮತ್ತು ಪ್ರತಿದಿನವೂ ಬಲಗೊಳ್ಳಬೇಕು. ಇದು ಮಹಾತ್ಮ ಗಾಂಧೀಜಿಯವರ 150ನೆಯ ಜನ್ಮ ವರ್ಷಾಚರಣೆಗೆ ಒಂದು ಅರ್ಥಪೂರ್ಣ ಕೊಡುಗೆಯಾಗಬಲ್ಲುದು.

- ಆರೋಗ್ಯದ ಸಮಸ್ಯೆಗಳು ದೇಶದ ವಿಸ್ತೃತ ಸಾಮಾಜಿಕ ಹಾಗೂ ಆರ್ಥಿಕ ಸವಾಲುಗಳೊಂದಿಗೆ ತಳುಕು ಹಾಕಿಕೊಂಡಿವೆ. ಈ ಸಮಸ್ಯೆಗಳನ್ನು ನಿವಾರಿಸಲು ಬೃಹತ್ ಪ್ರಮಾಣದ ವಿವಿಧೋದ್ದೇಶ ಕಾರ್ಯಕ್ರಮಗಳ ಅಗತ್ಯವಿದೆ. ಅವು ಆಧುನಿಕ ವೈದ್ಯಕೀಯ ಮತ್ತು ಸಾಂಪ್ರದಾಯಿಕ ಜ್ಞಾನದ ಶಕ್ತಿಯನ್ನು ಪಡೆಯಬೇಕಾಗಿದೆ. ಅವು ದೇಹ ಮತ್ತು ಮನಸ್ಸು ಎರಡರ ಬಗೆಗೂ ಗಮನ ಕೊಡಬೇಕಿದೆ. ಅವು ನಿಯಂತ್ರಣ ಮತ್ತು ನಿವಾರಣೆ ಎರಡನ್ನೂ ಒಳಗೊಳ್ಳಬೇಕು. ಈ ಹೊಸ ಆವರಣದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ವಿವಿಧ ಆಯಾಮಗಳ ಬಗ್ಗೆ ಗಮನ ಹರಿಸಲಾಗುತ್ತದೆ ಎಂದು ತಿಳಿದು ಸಂತೋಷವಾಗಿದೆ. ಉದಾಹರಣೆಗೆ ಯೋಗ ಮತ್ತು ಸಾಂಪ್ರದಾಯಿಕ ಭಾರತೀಯ ವೈದ್ಯಶಾಸ್ತ್ರದ ಯೋಜನೆಗಳು ಪರ್ಯಾಯ ಚಿಕಿತ್ಸೆಯನ್ನು ಪ್ರಾಚೀನ ತಿಳುವಳಿಕೆಯ ನೆರವಿನಿಂದ ಶ್ರೀಮಂತಗೊಳಿಸಬಲ್ಲವು. ಇಂದಿನ ಒತ್ತಡದ ಬದುಕಿನಿಂದುಂಟಾಗುವ ಮಾನಸಿಕ ಅಸ್ವಸ್ಥತೆ ಮತ್ತು ರೋಗಗಳ ವಿರುದ್ಧದ ಹೋರಾಟವನ್ನು ಮನೋವೈಜ್ಞಾನಿಕ ಮತ್ತು ಮಾನಸಿಕ ಆರೋಗ್ಯ ಕಾರ್ಯಕ್ರಮಗಳು ಸಶಕ್ತಗೊಳಿಸುವುವು.

- ವೃತ್ತಿಪರರಾಗಿ ನಿಮ್ಮ ಪರಿಣತಿ ಮತ್ತು ಸೇವೆಗಾಗಿ ಅಭಿನಂದನಾರ್ಹರಿದ್ದೀರಿ. ಇದರ ಜೊತೆಗೆ, ಸಮುದಾಯಕ್ಕೆ ನಿಮ್ಮದೇ ಆದ ಕೊಡುಗೆಯ ಅಗತ್ಯವೂ ಇದೆ. ನೀವು ಬಯಸುವ ಯಾವುದೇ ರೀತಿಯಲ್ಲಿ ಇದನ್ನು ಸಾಧಿಸಬಹುದು. ಉದಾಹರಣೆಗೆ, ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಲು ನಿರ್ಧರಿಸಬಹುದು; ತಿಂಗಳಲ್ಲಿ ಒಂದು ಅಥವಾ ಎರಡು ಸಲ ಅವಕಾಶವಂಚಿತ ನೆರೆ ಹೊರೆಯವರಿಗೆ ಸೇವೆ ಸಲ್ಲಿಸಬಹುದು; ಸ್ವತಂತ್ರವಾಗಿ ಅಥವಾ ಸ್ವಯಂಸೇವಾ ಸಂಸ್ಥೆಗಳೊಂದಿಗೆ ಕೈಜೋಡಿಸಿ ಆರೋಗ್ಯವನ್ನು ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬಹುದು. ನೆನಪಿರಲಿ, ಸಮುದಾಯಕ್ಕಾಗಿ ಮಾಡುವ ಸೇವೆ ಸಮಾಜವನ್ನು ಬಹು ಕಾಲ ಸಂತೋಷ ಮತ್ತು ಸ್ವಾಸ್ಥ್ಯದಲ್ಲಿ ಮುನ್ನಡೆಸುವುದು. ನಿಮ್ಮ ಜ್ಞಾನ ಸಮಾಜದ ಎಲ್ಲ ಸೋದರ-ಸೋದರಿಯರ ಒಳಿತಿಗಾಗಿ ಬಳಕೆಯಾಗುವುದು. ನಿಮ್ಮ ಘನತೆಯನ್ನೂ ಹೆಚ್ಚಿಸುವುದು.

- ಶಿಕ್ಷಣ ಕ್ಷೇತ್ರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಸಲ್ಲಿಸುತ್ತಿರುವ ಅತ್ಯುತ್ತಮ ಸೇವೆಗಾಗಿ ನಾನು ನಿಮ್ಮೆಲ್ಲರನ್ನೂ, ಮತ್ತೊಮ್ಮೆ ಅಭಿನಂದಿಸುತ್ತೇನೆ. ಮುಖ್ಯವಾಗಿ ಈ ಸಂಕೀರ್ಣವನ್ನು ರೂಪಿಸಿರುವ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯನ್ನು ಅಭಿನಂದಿಸುತ್ತೇನೆ. ಸಂಸ್ಥೆಯ ಈ ಯೋಜನೆಗಾಗಿ ಮತ್ತು ಭವಿಷ್ಯದ ಎಲ್ಲ ಸಾಹಸಗಳಿಗಾಗಿ ಶುಭ ಕಾಮನೆಗಳನ್ನು ಸಲ್ಲಿಸುತ್ತೇನೆ.

ಧನ್ಯವಾದ ಜೈಹಿಂದ್

# ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕೊಡುಗೆ ಅಪಾರ

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಗಣನೀಯ ಸಾಧನೆ ಮಾಡಿದೆ ಎಂದು ರಾಷ್ಟ್ರಪತಿಗಳಾದ ಶ್ರೀ ರಾಮ್ ನಾಥ್ ಕೋವಿಂದ್‌ರವರು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರಿನ ಬಳಿ ವರುಣದಲ್ಲಿ ಅಕ್ಟೋಬರ್ 11 ರಂದು ಜರುಗಿದ ರಾಜೇಂದ್ರ ಶ್ರೀಗಳವರ 104ನೇ ಜಯಂತಿ ಹಾಗೂ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ನೂತನ ಸಮುಚ್ಚಯದ ಶಿಲಾನ್ಯಾಸವನ್ನು ನೆರವೇರಿಸಿ ಮಾತನಾಡುತ್ತಾ ಶ್ರೀ ರಾಜೇಂದ್ರ ಮಹಾಸ್ವಾಮೀಜಿಯವರ ದೂರದೃಷ್ಟಿಯ ಫಲವಾಗಿ ಜೆಎಸ್‌ಎಸ್ ಸಂಸ್ಥೆ ಸಾಕಷ್ಟು ಸಾಧನೆ ಮಾಡಿದೆ. ಅವರಿಂದ ಆರಂಭವಾದ ಮಹಾವಿದ್ಯಾಪೀಠ ಈಗ 300ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು ಹಾಗೂ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವುದು ವಿಶೇಷವಾಗಿದೆ. ಸುತ್ತೂರು ಮಠ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಧಾರ್ಮಿಕ ತಳಹದಿಯ ಮೇಲೆ ನಿಂತಿದೆ. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರ ಉತ್ತೇಜನದಿಂದಾಗಿ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯವು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯಾಗಿ ಮಾರ್ಪಟ್ಟು ಆರೋಗ್ಯ ವಿಜ್ಞಾನದಲ್ಲಿ



ಸನ್ಮಾನ್ಯ ರಾಷ್ಟ್ರಪತಿಗಳಾದ ಶ್ರೀ ರಾಮ್ ನಾಥ್ ಕೋವಿಂದ್‌ರವರನ್ನು ಪರಮಪೂಜ್ಯ ಜಗದ್ಗುರುಗಳು ಸ್ಮರಣಿಕೆ ನೀಡಿ ಆಶೀರ್ವದಿಸುತ್ತಿರುವುದು

ಗಮನಾರ್ಹವಾದ ಸಾಧನೆ ಮಾಡಿದೆ. ಕರ್ನಾಟಕ ರಾಜ್ಯದ ಶೈಕ್ಷಣಿಕ ಬೆಳವಣಿಗೆಗೆ ಹಾಗೂ ಮೈಸೂರು ಪ್ರಾಂತ್ಯದ ಅಭಿವೃದ್ಧಿಗೆ ಸುತ್ತೂರು ಶ್ರೀಗಳ ಕೊಡುಗೆ ಅಪಾರ ಎಂದು ರಾಷ್ಟ್ರಪತಿಗಳವರು ಶ್ಲಾಘಿಸಿದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಜಗದ್ಗುರುಗಳವರು ರಾಜೇಂದ್ರ ಶ್ರೀಗಳಿಗೂ ಮತ್ತು ಶ್ರೀ ಜಯಚಾಮರಾಜ ಒಡೆಯರ್ ಅವರಿಗೂ ಗುರು–ಶಿಷ್ಯರ ಅವಿನಾಭಾವ ಸಂಬಂಧವಿತ್ತು. ಈಗ ಸ್ಥಾಪಿಸಲಾಗುತ್ತಿರುವ ಜಾಗತಿಕ ಮಟ್ಟದ ನೂತನ ಸಮುಚ್ಚಯವು 101 ಎಕರೆ ವಿಸ್ತೀರ್ಣ ನಿವೇಶನ ಹೊಂದಿದ್ದು ಶೇ. 25 ರಷ್ಟು ಪ್ರದೇಶದಲ್ಲಿ ಮಾತ್ರ ಕಟ್ಟಡ ನಿರ್ಮಾಣವಾಗಲಿದೆ. ಉಳಿದ ಭಾಗ ಸಂಪೂರ್ಣ ಹಸಿರುಮಯವಾಗಿರುತ್ತದೆ. ಮಳೆನೀರು ಕೊಯ್ಲು ಮೂಲಕ ಪರಿಸರಕ್ಕೆ ಪೂರಕವಾಗಿ ಯೋಜನೆಯನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ರಾಜ್ಯಪಾಲರಾದ ಶ್ರೀ ವಜೂಭಾಯಿ ರೂಡಭಾಯಿ ವಾಲಾರವರು ಮಾತನಾಡಿ ಧಾರ್ಮಿಕ ಮಂದಿರಗಳಿಗಿಂತ ಹೆಚ್ಚಾಗಿ ವಿದ್ಯಾಮಂದಿರಗಳನ್ನು ಇಂದು ತೆರೆಯಬೇಕಾಗಿದೆ. ಈ ಕೆಲಸವನ್ನು ಸುತ್ತೂರು ಮಠ ಮಾಡುತ್ತಿದೆ. ಹೀಗೆ ಮಂದಿರಗಳಿಗಿಂತ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಹೆಚ್ಚುತ್ತ ಹೋದರೆ ಶೇ. 100 ರಷ್ಟು ಸಾಕ್ಷರತೆ ಸಾಧಿಸಲು ಸಾಧ್ಯ. ನಾವು ದುಡಿದು ಸಂಪಾದಿಸಿದ್ದರ ಶೇ. 10 ರಷ್ಟನ್ನು ಇಂತಹ ಮಠಗಳಿಗೆ ನೀಡಿದಾಗ ಜನೋಪಕಾರಿ ಕೆಲಸಗಳಿಗೆ ಬಳಕೆಯಾಗುತ್ತದೆ ಎಂದು ಹೇಳಿದರು.

ಕೇಂದ್ರ ಸಚಿವರಾದ ಶ್ರೀ ಡಿ.ವಿ. ಸದಾನಂದ ಗೌಡರವರು ಮಾತನಾಡಿ ಒಂದು ಸಾವಿರ ವರ್ಷದ ಇತಿಹಾಸವುಳ್ಳ ಸುತ್ತೂರು ಮಠ ತ್ರಿವಿಧ ದಾಸೋಹ ಮತ್ತು ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡುತ್ತಾ ಸಮಾಜದ ಉನ್ನತಿಗಾಗಿ ಶ್ರಮಿಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ವಿಜಯಪುರ ಜ್ಞಾನ ಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು, ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಆದಿಚುಂಚುನ ಗಿರಿಯ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ಸನ್ಮಾನ್ಯ ರಾಷ್ಟ್ರಪತಿಗಳವರ ಪತ್ನಿ ಶ್ರೀಮತಿ ಸವಿತಾ ಕೋವಿಂದ್, ಸಚಿವರಾದ ಶ್ರೀ ವಿ. ಸೋಮಣ್ಣ, ಸಂಸದರಾದ ಶ್ರೀ ವಿ. ಶ್ರೀನಿವಾಸ ಪ್ರಸಾದ್, ಶಾಸಕರಾದ ಡಾ. ಯತೀಂದ್ರ ಸಿದ್ಧರಾಮಯ್ಯನವರು ಉಪಸ್ಥಿತರಿದ್ದರು. □

---

**ಜೆಎಸ್‌ಎಸ್ ಸಂಸ್ಥೆಗಳಲ್ಲಿ**
**ನಡೆಯುವ ಕಾರ್ಯಕ್ರಮದ ವರದಿಗಳು ಮತ್ತು ಛಾಯಾಚಿತ್ರಗಳನ್ನು**
**ಜೆಎಸ್‌ಎಸ್ ಮಾಸಪತ್ರಿಕೆಯ**
**ಈ ಇಮೇಲ್ ವಿಳಾಸಕ್ಕೆ ಕಳುಹಿಸುವುದು :**
**email:jssmasapatrike@gmail.com**

# ರಕ್ತದಾನದ ಬಗ್ಗೆ ತಪ್ಪು ತಿಳುವಳಿಕೆ ಬೇಡ



ರಕ್ತದಾನದ ಬಗ್ಗೆ ನಮ್ಮ ಜನರಲ್ಲಿರುವ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಿ ರಕ್ತದಾನಕ್ಕೆ ಪ್ರೇರೇಪಿಸಬೇಕು ಎಂದು ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ರಘುರಾಮ ಸರ್ವೇಕರ್‌ರವರು ಹೇಳಿದರು.

ಚಾಮರಾಜನಗರ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್ ಘಟಕ ಮತ್ತು ಆಂತರಿಕ ಗುಣಮಟ್ಟ ಖಾತರಿ ಸಮಿತಿ ವತಿಯಿಂದ ಸೆಪ್ಟಂಬರ್ 19 ರಂದು ಏರ್ಪಡಿಸಿದ್ದ ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ ಅವರು ಮಾತನಾಡಿದರು. ಚಾಮರಾಜನಗರ ಭಾಗದ ಜನರು ಅಪೌಷ್ಟಿಕತೆಯಿಂದ ಬಳಲುತ್ತಿದ್ದು ಇದು ಹಲವು ರೋಗಗಳಿಗೆ ಮತ್ತು ರಕ್ತಹೀನತೆಗೆ ಕಾರಣವಾಗುತ್ತಿದೆ. ಆಸ್ಪತ್ರೆಗಳ ರಕ್ತನಿಧಿ ಕೇಂದ್ರದಲ್ಲಿ ರಕ್ತದ ಕೊರತೆಯಿದೆ. ಹೀಗಾಗಿ ಆರೋಗ್ಯವಂತರೆಲ್ಲರೂ ರಕ್ತದಾನ ಮಾಡಬಹುದು ಎಂದು ರಕ್ತದಾನದ ಮಹತ್ವ ತಿಳಿಸಿದರು.

ಜಿಲ್ಲಾ ರಕ್ತನಿಧಿ ಅಧಿಕಾರಿಗಳಾದ ಡಾ. ಸುಜಾತರವರು ರಕ್ತವು ಅತ್ಯಮೂಲ್ಯವಾದುದು. ಅದು ಎಲ್ಲರಲ್ಲೂ ಸಾಕಷ್ಟು ಪ್ರಮಾಣದಲ್ಲಿ ಇರುವುದಿಲ್ಲ. ಹೀಗಾಗಿಯೇ ರಕ್ತನಿಧಿ ಕೇಂದ್ರಗಳಿರುವುದು. ರಕ್ತದಾನ ಮಾಡುವುದರಿಂದ ಒಂದು ಜೀವವನ್ನು ಉಳಿಸಿದ ಸಾರ್ಥಕ ಭಾವ ನಮ್ಮದಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ವೈದ್ಯಕೀಯ ವಿಜ್ಞಾನ ಕಾಲೇಜಿನ ಮುಖ್ಯಸ್ಥರಾದ ಡಾ. ರಾಜೇಂದ್ರರವರು ಮಾತನಾಡಿ ರಕ್ತದಾನ ಮಹಾದಾನ. ಇಲ್ಲಿ ರಕ್ತದಾನ ಏರ್ಪಡಿಸಿರುವುದು ಉತ್ತಮವಾದ ಕಾರ್ಯ ಎಂದರು. ತಾವು ಕೂಡ ಈ ಹಿಂದೆ ಜೆಎಸ್‌ಎಸ್ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿರುವುದನ್ನು ಸ್ಮರಿಸಿದರು.

ಶಿಬಿರದಲ್ಲಿ ಒಟ್ಟು 32 ಜನರು ರಕ್ತದಾನ ಮಾಡಿ ಇತರರಿಗೆ ಮಾದರಿಯಾದರು. ಪ್ರಾಂಶುಪಾಲರಾದ ಪ್ರೊ. ಎ.ಜಿ. ಶಿವಕುಮಾರ್ ಮತ್ತು ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪ್ಲಾಸ್ಟಿಕ್ ಬಳಕೆ ಆರೋಗ್ಯಕ್ಕೆ ಮಾರಕ

ಪ್ಲಾಸ್ಟಿಕ್ ಬಳಕೆ ಅನೇಕ ಕಾಯಿಲೆಗಳಿಗೆ ಕಾರಣವಾಗಿದ್ದು ಪರಿಸರವನ್ನು ನಾಶ ಮಾಡುತ್ತಿದೆ ಎಂದು ಪ್ರೊ. ಬಿ.ವಿ. ಸಾಂಬಶಿವಯ್ಯನವರು ತಿಳಿಸಿದರು.

ಮೈಸೂರಿನ ಬಿ.ಎನ್. ರಸ್ತೆಯ ಜೆಎಸ್‌ಎಸ್ ಕಾಲೇಜಿನ ವತಿಯಿಂದ ನಂಜನಗೂಡು ತಾಲ್ಲೂಕು, ಮೂಡಹಳ್ಳಿಯಲ್ಲಿ ಅಕ್ಟೋಬರ್ 1 ರಂದು ಹಮ್ಮಿಕೊಂಡಿದ್ದ 'ಉನ್ನತ ಭಾರತ್ ಅಭಿಯಾನ್' ಮತ್ತು 'ಸ್ವಚ್ಛತಾ ಹಿ ಸೇವಾ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಪ್ಲಾಸ್ಟಿಕ್ ಬಳಕೆ ಬೆಳೆದು ಬಂದ ಬಗೆ ಹಾಗೂ ಅದರಿಂದಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಗ್ರಾಮಸ್ಥರು ಮತ್ತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು. ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಬಟ್ಟೆಯಿಂದ ತಯಾರಿಸಿದ ಉತ್ಪನ್ನಗಳನ್ನು ಉಪಯೋಗಿಸಿ ಪರಿಸರವನ್ನು ಕಾಪಾಡಬೇಕು ಎಂದು ತಿಳಿ ಹೇಳಿದರು.




ಕಾಲೇಜಿನ ವಿದ್ಯಾರ್ಥಿಗಳು ಗ್ರಾಮದ ಬೀದಿಗಳಲ್ಲಿ ಜಾಥಾ ನಡೆಸಿ ಬೀದಿ ನಾಟಕಗಳ ಮೂಲಕ ಪ್ಲಾಸ್ಟಿಕ್‌ನಿಂದಾಗುವ ದುಷ್ಪರಿಣಾಮ ಬಗ್ಗೆ ಜಾಗೃತಿ ಮೂಡಿಸಿದರು. ಆಲತ್ತೂರು, ಮಾದಯ್ಯನಹುಂಡಿ, ಹದಿನಾರು ಮೋಳೆ, ಮಲ್ಲರಾಜಯ್ಯನಹುಂಡಿ ಗ್ರಾಮಗಳಲ್ಲಿಯೂ ಅಭಿಯಾನವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ನಂದೀಶ್‌ಕುಮಾರ್, ಶ್ರೀ ನಂಜುಂಡಸ್ವಾಮಿ, ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ. ಡಿ.ಎಸ್. ಸದಾಶಿವಮೂರ್ತಿ ಮತ್ತು ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಶ್ರೀ ಎನ್. ಸಂತೋಷ್‌ಕುಮಾರ್ ಉಪಸ್ಥಿತರಿದ್ದರು.

## ಯುವ ಸಂಭ್ರಮದಲ್ಲಿ ಗಮನ ಸೆಳೆದ ವಿಶೇಷಚೇತನರು

ಮೈಸೂರು ದಸರಾ ಅಂಗವಾಗಿ ಸೆಪ್ಟೆಂಬರ್ 18 ರಂದು ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ನಡೆದ 'ಯುವ ಸಂಭ್ರಮ' ಕಾರ್ಯಕ್ರಮದಲ್ಲಿ ಸರಸ್ವತಿಪುರಂನ ಜೆಎಸ್‌ಎಸ್ ಸಹನಾ ಸಮನ್ವಯ ಶಿಕ್ಷಣ ಶಾಲೆಯ 30ಕ್ಕೂ ಹೆಚ್ಚು ವಿಶೇಷಚೇತನ ಮಕ್ಕಳು ಭಾಗವಹಿಸಿ ತಮ್ಮ ಪ್ರತಿಭೆ ಪ್ರದರ್ಶಿಸಿದರು.

'ಮಹಿಷಾಸುರ ಮರ್ಧಿನಿ' ಹಾಗೂ 'ಮೈಸೂರು ದಸರಾ ಎಷ್ಟೊಂದು ಸುಂದರ' ಎಂಬ ನೃತ್ಯ ರೂಪಕವನ್ನು ಪ್ರದರ್ಶಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು. 'ಮಹಿಷಾಸುರ ಸಂಹಾರ' ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ಅನಾವರಣಗೊಳಿಸಿ ಪ್ರಶಂಸೆಗೆ ಪಾತ್ರರಾದರು.

---

## ನುಡಿದಂತೆ ನಡೆದವರು ಗಾಂಧೀಜಿ

ಗಾಂಧೀಜಿಯವರ ಅಂತರಂಗ ಮತ್ತು ಬಹಿರಂಗದಲ್ಲಿ ಯಾವುದೇ ವ್ಯತ್ಯಾಸವಿರಲಿಲ್ಲ. ಅವರು ನುಡಿದಂತೆ ನಡೆದರು ಎಂದು ಸಾಮಾಜಿಕ ಕಾರ್ಯಕರ್ತರಾದ ಶ್ರೀ ಸಂತೋಷ್ ಕೌಲಗಿ ಯವರು ಹೇಳಿದರು.

ಅಕ್ಟೋಬರ್ 2 ರಂದು ಸುತ್ತೂರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ಏರ್ಪಡಿಸಿದ್ದ ಮಹಾತ್ಮ ಗಾಂಧೀಜಿ, ಲಾಲ್‌ಬಹದ್ದೂರ್‌ಶಾಸ್ತ್ರಿ ಜಯಂತಿ ಹಾಗೂ ವಿಶ್ವ ಹಿರಿಯರ ದಿನಾಚರಣೆ ಯಲ್ಲಿ ಮಾತನಾಡುತ್ತಾ




ಸುತ್ತೂರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ಹಮ್ಮಿಕೊಂಡಿದ್ದ ಮಹಾತ್ಮ ಗಾಂಧಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿ ಹಾಗೂ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯಲ್ಲಿ ಶ್ರೀ ಸಂತೋಷ್ ಕೌಲಗಿಯವರು ಮಾತನಾಡಿದರು. ಚಿತ್ರದಲ್ಲಿ ಡಾ. ಅರುಣ್‌ಬಳಮಟ್ಟಿ, ಡಾ. ನಂ. ತಪಸ್ವಿಕುಮಾರ್, ಶ್ರೀ ವಿ. ಗೋವಿಂದರಾಜುಲು ಹಾಗೂ ಸಂಸ್ಥೆಯ ಮುಖ್ಯಸ್ಥರುಗಳಿದ್ದಾರೆ

ಗಾಂಧೀಜಿಯವರ ಮತ್ತು ಶಾಸ್ತ್ರೀಜಿಯವರ ಆದರ್ಶಗಳು ನಮ್ಮೆಲ್ಲರಿಗೂ ಮಾದರಿ, ಅವರ ನಡೆ–ನುಡಿಗಳಿಂದಲೇ ಅವರು ಮಹಾತ್ಮರೆನಿಸಿ ಕೊಂಡರು ಎಂದು ತಿಳಿಸಿದರು.

ಶ್ರೀ ಗ್ಲೂಕೊ ಬಯೋಟೆಕ್‌ನ ವ್ಯವಸ್ಥಾಪಕ ರಾದ ಶ್ರೀ ವಿ. ಗೋವಿಂದರಾಜುಲುರವರು ಲಾಲ್‌ಬಹದ್ದೂರ್ ಶಾಸ್ತ್ರೀಜಿಯವರ ಪ್ರಾಮಾಣಿಕತೆ ಮತ್ತು ಸರಳ ಜೀವನ ಪ್ರತಿಯೊಬ್ಬ ಭಾರತೀಯ ರಿಗೂ ಆದರ್ಶವಾಗಿದೆ. ವಿದ್ಯಾರ್ಥಿಗಳು ಇಂತಹ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪಾಲಿಸಬೇಕು ಎಂದು ತಿಳಿ ಹೇಳಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಡಾ. ನಂ. ತಪಸ್ವೀಕುಮಾರ್, ಡಾ. ಅರುಣ್‌ಬಳಿಮಟ್ಟಿ, ಶ್ರೀ ಜಿ.ಎಲ್. ತ್ರಿಪುರಾಂತಕ, ಶ್ರೀ ಸಂಪತ್ತು, ಶ್ರೀ ವೀರಭದ್ರಯ್ಯ, ಶ್ರೀ ಪಿ. ಶಿವಮಲ್ಲು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಪ್ರಕೃತಿ ಮತ್ತು ಸಂಸ್ಕೃತಿ ಮನುಷ್ಯನ ಬೆಳವಣಿಗೆಗೆ ಸಹಕಾರಿ

ಕಲಿಕೆ ಎಂದರೆ ನಡವಳಿಕೆಯಲ್ಲಿನ ಬದಲಾವಣೆ ಎಂದು ಮಂಡ್ಯದ ಭಾರತಿ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಮ. ರಾಮಕೃಷ್ಣರವರು ಹೇಳಿದರು.

ಸೆಪ್ಟೆಂಬರ್ 30 ರಂದು ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಏರ್ಪಡಿಸಿದ್ದ 'ಸಾಹಿತ್ಯ ಮತ್ತು ಜೀವನ ಮೌಲ್ಯಗಳು' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡುತ್ತಾ, ವಿದ್ಯಾರ್ಥಿಗಳ ಪರಿಪೂರ್ಣ ಬೆಳವಣಿಗೆಯ ಸದುದ್ದೇಶದಿಂದಲೇ ಪಠ್ಯಕ್ರಮಗಳು ರೂಪುಗೊಳ್ಳುತ್ತವೆ. ನೇರವಾಗಿ ಕುಳಿತುಕೊಳ್ಳುವುದು, ಸ್ಪಷ್ಟವಾಗಿ ಮಾತನಾಡುವುದು ಕೂಡ ಸಂಸ್ಕೃತಿ ಎನಿಸುತ್ತದೆ. ಪ್ರಕೃತಿ ಮತ್ತು ಸಂಸ್ಕೃತಿಗಳು ಮನುಷ್ಯನ ಬದಲಾವಣೆಗೆ ಸಹಕಾರಿಯಾದ ಅಂಶಗಳು. ಪ್ರಕೃತಿಯು ಸಂಸ್ಕೃತಿಯಾಗಿ ರೂಪುಗೊಳ್ಳಲು ಪಠ್ಯಗಳು ಪ್ರಮುಖ ಪಾತ್ರವಹಿಸುತ್ತವೆ. ಪಠ್ಯದಲ್ಲಿ ಜೀವನ ಮೌಲ್ಯಗಳು ಮತ್ತು ಸಂಸ್ಕೃತಿಯು ಅಳವಡಿಕೆಯಿದೆ. ವಿದ್ಯಾರ್ಥಿಗಳು ವಿನಯವಂತಿಕೆ, ರಾಷ್ಟ್ರೀಯತೆ, ಶಿಸ್ತು ಮತ್ತು ಆತ್ಮವಿಶ್ವಾಸ ರೂಢಿಸಿಕೊಂಡಾಗ ಕಲಿಕೆ ಸಾರ್ಥಕವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ. ಕೆ.ವಿ. ಸುರೇಶ್, ವಿಭಾಗದ ಮುಖ್ಯಸ್ಥರಾದ ಡಾ. ಎಸ್.ಪಿ. ಉಮಾದೇವಿಯವರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಹಸಿವೆ ನೀನು ನಿಲ್ಲು ನಿಲ್ಲು
ತೃಷೆಯೆ ನೀನು ನಿಲ್ಲು ನಿಲ್ಲು
ನಿದ್ರೆಯೆ ನೀನು ನಿಲ್ಲು ನಿಲ್ಲು
ಕಾಮವೆ ನೀನು ನಿಲ್ಲು ನಿಲ್ಲು ಕ್ರೋಧವೆ ನೀನು ನಿಲ್ಲು ನಿಲ್ಲು
ಮೋಹವೆ ನೀನು ನಿಲ್ಲು ನಿಲ್ಲು ಲೋಭವೆ ನೀನು ನಿಲ್ಲು ನಿಲ್ಲು
ಮದವೆ ನೀನು ನಿಲ್ಲು ನಿಲ್ಲು ಮಚ್ಚರವೆ ನೀನು ನಿಲ್ಲು ನಿಲ್ಲು
ಸಚರಾಚರವೆ ನೀನು ನಿಲ್ಲು ನಿಲ್ಲು
ನಾನು ಚನ್ನಮಲ್ಲಿಕಾರ್ಜುನದೇವರ
ಅವಸರದ ಓಲೆಯನೊಯ್ಯುತ್ತಲಿದ್ದೇನೆ ಶರಣಾರ್ಥಿ
-ಅಕ್ಕಮಹಾದೇವಿ

# ವಿದ್ಯಾರ್ಥಿಗಳು ಸಮೂಹ ಮಾಧ್ಯಮಗಳಿಗೆ ದಾಸರಾಗಿ ಮಾನವೀಯ ಮೌಲ್ಯಗಳನ್ನು ಮರೆಯುತ್ತಿದ್ದಾರೆ




ಮೈಸೂರಿನ ಜೆ.ಪಿ. ನಗರದಲ್ಲಿರುವ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಮಾಲಿಕೆಯಲ್ಲಿ ಪ್ರೊ. ಪ್ರಸಾದ್‌ರವರು ಭಾರತದ ಹೊಸ ಆರ್ಥಿಕ ನೀತಿ ಕುರಿತು ಉಪನ್ಯಾಸ ನೀಡುತ್ತಿರುವುದು

ಸಮೂಹ ಮಾಧ್ಯಮಗಳಾದ ಫೇಸ್‌ಬುಕ್, ವಾಟ್ಸಪ್‌ಗಳಿಗೆ ವಿದ್ಯಾರ್ಥಿಗಳು ದಾಸರಾಗಿ ಗುರಿ, ಮಾನವೀಯ ಮೌಲ್ಯಗಳು ಮತ್ತು ಸಂಬಂಧಗಳ ಮಹತ್ವವನ್ನು ಅರಿಯುವಲ್ಲಿ ವಿಫಲರಾಗುತ್ತಿದ್ದಾರೆ ಎಂದು ಉಚ್ಚನ್ಯಾಯಾಲಯದ ಖ್ಯಾತ ವಕೀಲರಾದ ಶ್ರೀ ಸುರೇಶ್‌ಗೌಡರವರು ಹೇಳಿದರು.

ಮೈಸೂರಿನ ಜೆ.ಪಿ. ನಗರದಲ್ಲಿರುವ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ಉಪನ್ಯಾಸ ಮಾಲಿಕೆಯಲ್ಲಿ 'ಮಾನವೀಯ ಮೌಲ್ಯಗಳು ಮತ್ತು ಜಾಗೃತಿ' ಎಂಬ ವಿಷಯ ಕುರಿತು ಮಾತನಾಡುತ್ತಾ ವಿದ್ಯಾರ್ಥಿಗಳು ಪೋಷಕರಿಗೆ, ಗುರುಹಿರಿಯರಿಗೆ ನೀಡುವ ಗೌರವಾದರಗಳಿಂದ ಅವರ ವ್ಯಕ್ತಿತ್ವ ರೂಪುಗೊಂಡು ಭವ್ಯ ಭಾರತದ ನಿರ್ಮಾಣಕ್ಕೆ ಭದ್ರಬುನಾದಿ ಯಾಗುತ್ತದೆ ಎಂದು ತಿಳಿಸಿದರು.

ಸುತ್ತೂರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು 'ಧನಾತ್ಮಕ ಚಿಂತನೆ ಮತ್ತು ಯಶಸ್ಸು' ಎಂಬ ವಿಷಯದ ಕುರಿತು ಮಾತನಾಡಿ ಆಸ್ಟ್ರೇಲಿಯಾದ ಖ್ಯಾತ ವಾಗ್ಮಿ ನಿಕ್‌ವುಜಿಸೆಕ್ ಅವರಿಗೆ ಎರಡೂ ಕೈ ಮತ್ತು ಎರಡೂ ಕಾಲುಗಳು ಇಲ್ಲದಿದ್ದರೂ ಅವರು ಮಾಡಿರುವ ಸಾಧನೆ ಗಮನಾರ್ಹವಾದುದು. ಉತ್ತಮ ಚಿಂತನೆ, ಸತತ ಪರಿಶ್ರಮದಿಂದ ಯಶಸ್ಸು ಸಾಧಿಸಿ ಪೋಷಕರಿಗೆ, ಗುರುಗಳಿಗೆ ದೇಶಕ್ಕೆ ಕೀರ್ತಿ ತರುವ ವಿದ್ಯಾರ್ಥಿಗಳಾಗಬೇಕು ಎಂದು ಹೇಳಿದರು.

ಹುಲ್ಲಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ಪ್ರಸಾದ್‌ರವರು ಭಾರತದ ಹೊಸ ಆರ್ಥಿಕ ನೀತಿ ಕುರಿತು ಮಾತನಾಡುತ್ತಾ ಭಾರತದಲ್ಲಿ ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣವನ್ನು ಜಾರಿಗೊಳಿಸಿದ್ದರಿಂದ ಕೃಷಿ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆ ಕಾಣಲು ಸಾಧ್ಯವಾಯಿತು. ಬೃಹತ್ ಕೈಗಾರಿಕೆಗಳು ಸ್ಥಾಪನೆಗೊಂಡವು. ಇದರಿಂದ ಭಾರತದ ಆರ್ಥಿಕ ಪ್ರಗತಿಯು ವೇಗವಾಗಿ ಬೆಳೆಯಲು ಸಾಧ್ಯವಾಯಿತು ಎಂದರು.

ಪತ್ರಕರ್ತರು ಮತ್ತು ಇತಿಹಾಸ ತಜ್ಞರಾದ ಶ್ರೀ ಈಚನೂರು ಕುಮಾರ್‌ರವರು 'ಮೈಸೂರು ಮತ್ತು ರಾಜಮನೆತನ' ಕುರಿತು ಉಪನ್ಯಾಸ ನೀಡುತ್ತಾ ಮೈಸೂರಿನ ಪರಂಪರೆ, ಸಂಸ್ಕೃತಿ, ರಾಜರ ಆಳ್ವಿಕೆಯ ಬಗ್ಗೆ, ಪಾರಂಪರಿಕ ಕಟ್ಟಡಗಳ ಬಗ್ಗೆ ಉಪಯುಕ್ತ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ಚಾಮರಾಜನಗರದ ಜೆಎಸ್‌ಎಸ್ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ಎಂ. ವಿಜಯಕುಮಾರ್ ರವರು ಜೀವಶಾಸ್ತ್ರ ವಿಷಯ ಕುರಿತು ಮತ್ತು ನಿವೃತ್ತ ಉಪನ್ಯಾಸಕರಾದ ಶ್ರೀ ನಂಜುಂಡಸ್ವಾಮಿ ಯವರು 'ಭಾರತದ ಸಂವಿಧಾನದ ಕಿರುಪರಿಚಯ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಶ್ರೀ ಎಚ್.ಎಂ. ಮಹದೇವಪ್ಪ, ಉಪನ್ಯಾಸಕರಾದ ಶ್ರೀ ಎಸ್. ನಂದೀಶ್, ಶ್ರೀಮತಿ ಎಚ್.ಟಿ. ನಿರ್ಮಲ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

### ಅಥ್ಲೆಟಿಕ್ಸ್‌ನಲ್ಲಿ ಸಾಧನೆ

ಚಾಮರಾಜನಗರ ಜಿಲ್ಲೆಯ ಸಂತೇಮರಳ್ಳಿ ಯಲ್ಲಿ ನಡೆದ ವಲಯ ಮಟ್ಟದ ಅಥ್ಲೆಟಿಕ್ಸ್‌ನಲ್ಲಿ ಹಳ್ಳಿಕೆರೆಹುಂಡಿಯ ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ಕು. ಎಚ್.ಕೆ. ದೀಕ್ಷಿತಾ 800 ಮೀ. ಓಟದಲ್ಲಿ ಪ್ರಥಮ ಸ್ಥಾನ, ಕು. ಎಚ್.ಎಸ್. ರಕ್ಷಿತ 400 ಮೀ. ಓಟದಲ್ಲಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿ ಜಿಲ್ಲಾಮಟ್ಟದ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ. ಇವರನ್ನು ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿವರ್ಗ ದವರು ಅಭಿನಂದಿಸಿರುತ್ತಾರೆ.

### ದೇಸಿ ಕ್ರೀಡೆಗಳ ವಿಜೇತರು

ಮೈಸೂರು ದಸರಾ ಅಂಗವಾಗಿ ನಡೆದ ಮಕ್ಕಳ ದಸರಾದ ದೇಸಿ ಆಟಗಳ ಸ್ಪರ್ಧೆಯಲ್ಲಿ ಮೈಸೂರು ಶ್ರೀರಾಂಪುರ ಬಡಾವಣೆಯ ಜೆಎಸ್‌ಎಸ್ ಪ್ರೌಢಶಾಲಾ ವಿದ್ಯಾರ್ಥಿಗಳಾದ ಕು. ಕೆ. ರಾಜೇಶ್ ಹಾವು-ಏಣಿ ಆಟದಲ್ಲಿ ಪ್ರಥಮ, ಚೌಕಬಾರ ಮತ್ತು ಬುಗುರಿ ಆಟದಲ್ಲಿ ತೃತೀಯ, ಕು. ಎಂ. ತೇಜು ಬುಗುರಿ ಆಟದಲ್ಲಿ ಪ್ರಥಮ, ಹಾವು-ಏಣಿ ಆಟದಲ್ಲಿ ದ್ವಿತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ.

### ಗುರುಭೂಷಣ ಪ್ರಶಸ್ತಿ

ಮೈಸೂರಿನ ಉದಯಗಿರಿಯ ಜೆಎಸ್‌ಎಸ್ ಶಿಶುನಾಳ ಶರೀಫ ಪ್ರೌಢಶಾಲೆಯಲ್ಲಿ ಹಿಂದಿ ಭಾಷಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಆರ್. ಸರ್ವಮಂಗಳರವರು ಮೈಸೂರಿನ ನವೋದಯ ಫೌಂಡೇಶನ್ ಮತ್ತು ವಿಜಯಚೇತನ ಪದವಿಪೂರ್ವ ಕಾಲೇಜು ನೀಡುವ 2019ನೇ ಸಾಲಿನ ಗುರುಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ.

## ಕ್ರೀಡಾಕೂಟದಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ

ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಏರ್ಪಡಿಸಿದ್ದ ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಯಳಂದೂರು ತಾಲ್ಲೂಕಿನ ಗೌಡಹಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆಯ ಬಾಲಕಿಯರು ಥ್ರೋಬಾಲ್ ಆಟದಲ್ಲಿ ಪ್ರಥಮ ಸ್ಥಾನ ಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



ಅಥ್ಲೆಟಿಕ್ಸ್ ವಿಭಾಗದಲ್ಲಿ ಕು. ಎನ್. ಯೋಗೀಶ್ ಜಾವಲಿನ್‌ನಲ್ಲಿ ಪ್ರಥಮ ಮತ್ತು ಗುಂಡು ಎಸೆತದಲ್ಲಿ ದ್ವಿತೀಯ, ಕು. ಆರ್. ಸಚಿನ್ 1500 ಮೀ. ಓಟದಲ್ಲಿ ದ್ವಿತೀಯ, ಕು. ಎಸ್. ಶಶಿಕಲಾ ಜಾವಲಿನ್‌ನಲ್ಲಿ ಪ್ರಥಮ, ಕು. ಜಿ.ಎಂ. ಸ್ಫೂರ್ತಿ ದ್ವಿತೀಯ, ಡಿಸ್ಕಸ್ ಥ್ರೋನಲ್ಲಿ ಕು. ಮಹಾಲಕ್ಷ್ಮಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಜಿಲ್ಲಾಮಟ್ಟದ ಜಾವಲಿನ್ ಸ್ಪರ್ಧೆಯಲ್ಲಿ ಕು. ಜಿ.ಎಂ. ಸ್ಫೂರ್ತಿ ಪ್ರಥಮ ಹಾಗೂ ಕು. ಎನ್. ಯೋಗೀಶ್ ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

---

## ವಿಶ್ವ ಹೃದಯ ದಿನಾಚರಣೆ

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ 'ನನ್ನ ಹೃದಯ, ನಿನ್ನ ಹೃದಯ' ಎಂಬ ಧ್ಯೇಯ ವಾಕ್ಯದಡಿಯಲ್ಲಿ ವಿಶ್ವ ಹೃದಯ ದಿನಾಚರಣೆಯನ್ನು ಆಚರಿಸಲಾಯಿತು.

ಆಸ್ಪತ್ರೆಯ ನಿರ್ದೇಶಕರಾದ ಕರ್ನಲ್ ಡಾ. ಎಂ. ದಯಾನಂದರವರು ಹೃದಯ ಮತ್ತು ಆರೋಗ್ಯದ ಬಗ್ಗೆ ಮಾತನಾಡಿ ಹೃದಯ ತಪಾಸಣಾ ಪ್ಯಾಕೇಜ್ ಬಿಡುಗಡೆ ಮಾಡಿದರು. ವೈದ್ಯಕೀಯ ಅಧೀಕ್ಷಕರಾದ ಡಾ. ಗುರುಸ್ವಾಮಿ, ಮುಖ್ಯ ಆಡಳಿತಾಧಿಕಾರಿಗಳಾದ ಬಸವರಾಜ್ ಕುಪ್ಪಸದ, ಡಾ. ಶಾಂತಮಲ್ಲಪ್ಪ, ಶ್ರೀ ಭಗವಾನ್, ಡಾ. ಸುಭಾಷ್‌ಚಂದ್ರ, ಡಾ. ಸುನೀಲ್ ಕುಮಾರ್ ಮುಂತಾದವರು ಉಪಸ್ಥಿತರಿದ್ದರು.

---

## ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ

ಚಾಮರಾಜನಗರದ ಜೆಎಸ್‌ಎಸ್ ಬಾಲಕರ ಪ್ರೌಢಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಎಂ. ಶ್ರೀನಿವಾಸಮೂರ್ತಿಯವರ ಸಾಧನೆಯನ್ನು ಗುರುತಿಸಿ, ಜಿಲ್ಲಾಡಳಿತ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಶಿಕ್ಷಕರ ದಿನಾಚರಣೆಯಲ್ಲಿ ಪ್ರದಾನ ಮಾಡಲಾಯಿತು. ಸಂಸ್ಥೆಯ ಮುಖ್ಯಸ್ಥರು, ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗದವರು ಇವರನ್ನು ಅಭಿನಂದಿಸಿರುತ್ತಾರೆ.

---



ತಾಲ್ಲೂಕು ಮಟ್ಟದ ಅಥ್ಲೆಟಿಕ್ಸ್‌ನಲ್ಲಿ ವಿಜೇತರಾದ ಹಳ್ಳಿಕೆರೆಹುಂಡಿಯ ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳೊಂದಿಗೆ ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿವರ್ಗದವರು



ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ದಶಮ ಘಟಿಕೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಅತಿಥಿಗಳೊಂದಿಗೆ ವಿದ್ಯಾರ್ಥಿಗಳು



ಮಾಲೂರಿನ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ವತಿಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ವಿಜ್ಞಾನ ಗಣಿತ ಒಲಂಪಿಯಾಡ್ ಸ್ಪರ್ಧೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಯೊಂದಿಗೆ ಸಂಯೋಜನಾಧಿಕಾರಿಗಳು, ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು



ಬೆಂಗಳೂರಿನ ಕೋಣನಕುಂಟೆಯ ಜೆಎಸ್‌ಎಸ್ ಸಂಸ್ಥೆಗಳ ಆಶ್ರಯದಲ್ಲಿ ನಡೆದ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರ ಜಯಂತಿಯಲ್ಲಿ ಸಂಚಾರಿ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರಾದ ಶ್ರೀ ರಮೇಶ್‌ಕುಮಾರ್ ಪುಷ್ಪಾರ್ಚನೆ ಮಾಡುತ್ತಿರುವುದು




ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ನಡೆದ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರ ಜಯಂತಿ ಕಾರ್ಯಕ್ರಮದಲ್ಲಿ ಶ್ರೀಮತಿ ಡಾ. ಸಿ.ಜಿ. ಉಷಾದೇವಿ, ಶ್ರೀಮತಿ ಎಚ್.ಎಂ. ಶೈಲಜರವರು ಹಾಗೂ ವಿದ್ಯಾರ್ಥಿಗಳು

ENGLISH SECTION

## ACTIVITIES IN THE DEPARTMENT OF WATER AND HEALTH FACULTY OF LIFE SCIENCES

### Training programme conducted

To sensitize the student community on climate change and plastic management, a training programme was held on 22.8.2019, by the



Sri B.N. Ramesh Kumar addressing the students at the programme

Environmental Management & Policy Research Institute Bengaluru, Govt. of Karnataka at the Division of Environmental Science, Dept. of Water & Health, JSS AHER, Mysuru. Dr. S. Balasubramanian, Dean & Director (Research), JSSAHER, inaugurated the event. Sri Ramesh Chandrappa, Project Development Officer, EMPRI delivered a lecture on climate change and its impact. Sri B.N. Ramesh Kumar, former CEO, KSPCB highlighted about Biomedical Waste Management Rule, 2016. Sri Basavarajappa, Head Training Officer, EMPRI provided detailed information about Solid Waste Management. Sri Satyashree, Project Coordinator, EMPRI enlightened the students about plastic pollution and its impact on the environment.

### Special Lectures by faculties

Dr. Asha Srinivasan, Assistant Professor of Nanoscience & Technology, was invited to a deliver a talk titled "Harnessing Biomaterials on Nanomedicine" at the Biomaterials, Cellular and Tissue Engineering Congress, held in Dublin, Ireland on 19th and 20th June 2019. Her talk received good appreciation. She also chaired a session on "Nanobio-technology Series" at the Congress.

Dr. Srinivasan was invited for two talks titled "Use of Drug Loaded

Nanofibers in diabetic wounds" on 17.6.2019 at the University of Bradford, and between 21st- 24th June 2019 at the University of Manchester. Her talk was streamed live in the University of Bradford website. She is collaborating with research studies with that University since 2016.

## NSS Activities

Sri B.N. Inchara Bhavith, NSS Volunteer participated in the 200 member Indian Youth Delegation to China between 2nd-9th July 2019, organized by the Ministry of Youth Affairs & Sports, Govt. of India.

## Special Events

Induction programme for the first year MSc students of the Department for the academic year 2019-20 was held on 23.8.2019. The programme was inaugurated by the Chief Guest, Dr.A. Sivathanu Pillai, Former CEO, BrahMos Aerospace. Dr. B. Suresh, Pro-Chancellor, Dr. H. Basavana Gowdappa, Vice-Chancellor, JSS AHER, Dr. B. Manjunatha, Registrar, Dr. P.A. Kushalappa, Director - (Acad.), Dr. S. Balasubramanian, Dean - & Director (Research), Dr. Sudhindra Bhat, Controller of Examinations, JSS AHER, and Dr. K.A. Raveesha, Professor & Head, DWH-FLS were present at the event.

Dr. A. Sivathanu Pillai addressed the students and staff on "Technological Innovations and Inspirational Leadership". Recollecting the emergence



Dr. S. Balasubramanian, Dean-FLS, Director-Research, Dr. P.A. Kushalappa, Director (Academics), Dr. B. Manjunatha, Registrar, Dr. A. Sivathanu Pillai, Former CEO, BrahMos Aerospace, Dr. B. Suresh, Pro-Chancellor, Dr. H. Basavana Gowdappa, Vice Chancellor, Dr. Sudhindra Bhat, Dr. K.A Raveesha, Professor & Head DWH-FLS.

of Integrated Guided Missile Development Program, viz., Prithvi, Trishul, Akash, Nag which strengthened the Defence Department, he provided instances of how technological innovation was efficiently employed with inspirational leadership by the likes of Dr. A.P.J. Abdul Kalam. The programme was presided by Dr. B. Suresh, Pro-Chancellor, JSS AHER, who spoke how the Academy is providing innovational ambience to the students apart from regular curriculum. Dr. H. Basavana Gowdappa, addressed the gathering by congratulating the students for joining this institution. He also highlighted how young faculties have been an integral part of the Department's growth. Dr. B. Manjunatha provided a presentation showcasing the history and journey of Suttur Math from being a religious centre to transforming the social and educational hub of the society. He advised the inductees about the various rankings, recognitions and affiliations the institution has achieved over the years.

---

## Google's Explore ML Workshop

The student-driven Developer Student Club of JSS STU successfully was conducted its two day Intense Explore ML Workshop in the beginner and intermediate track. on 12.10.2019. It was attended by more than 80 students who were given the basic ideas of what ML (Machine Learning) and its working. Certificates were issued by the Google AI team for the attendees. The interactive session bought goodies to students during each session which made the vibe more interesting.



## INFOTSAV 2019

A two-day Technical and Cultural Fest INFOTSAV was held on 12th and 13th Oct. 2019 in SJCE. The event was organized by the Dept. of Computer Applications and was inaugurated by Dr. Nagesh Poojary, Head of Computer Vision, Continental Automotive Components, Bengaluru, Prof. T.N. Nagabhushan, Principal & Dean, Dr. V.N. Manjunath Aradhya, Head of the Department, Sri Tejaswi, Faculty Coordinator, who lighted the traditinal lamp.

This was followed by a technical talk by Dr. Nagesh Poojary who presented different aspects and components of research on autonomous cars at Continental. He highlighted the constraints in building intelligence into the cars and showed different videos on different demo cars which operate on Artificial Intelligence. He also mentioned about the tools such as C++, Image Processing at Continental and stressed the need of deep learning technologies in building automatic cars Events such as Hackathon, Ideathon and Tech Secrets were tested to assess their programming skills. Students from various colleges and also the Departments of JSS Science and Technology University is the event participated in this event.



(In Picture: Chief Guest Dr. Nagesh Poojary, lighting the lamp with other dignitaries)

# Innovation Day 2019

On the Birth Anniversary of Dr. A.P.J. Abdul Kalam, JSS STU celebrated the Innovation Day on 15.10.2019. A pre-event KYP (Know Your Problem) prize distribution was also witnessed on this behalf.

The Chief Guest, Dr. B. Suresh, Pro-Chancellor, JSS Academy of Higher Education & Research and President, Pharmacy Council of India distributed the prizes and shared his words of wisdom with the participants.

Dr. L Jawahar Nesan, Vice-Chancellor, JSS Science and Technology University spoke about the society driven activities and its importance during the event.




Dr. B. Suresh, Pro-Chancellor, JSS AHER delivering the keynote address. Dr. Prabhuswamy, Incharge Principal, SJCE, Dr. L Jawahar Nesan, Vice Chancellor, JSS STU; Sri Adarsh, IIC Student Representative, JSS STU

As fire is in stone
As reflection in water
As the tree in the seed
As silence in sound,
You, *Goheshwara*, are in
Your devotees

*- Allama Prabhu*

When the mind swallowed form
and the form swallowed mind,
since *Brahma* swallowed both,
where is that which is called 'I',
*Akhandeshwara?*

*- Shanmukha Swamy*

ಪರಮಪೂಜ್ಯ ಜಗದ್ಗುರು ರಾಜಗುರು ತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 104ನೆಯ ಜಯಂತಿ ಮಹೋತ್ಸವದಲ್ಲಿ ಪರಮಪೂಜ್ಯ ಶ್ರೀಗಳ ಸಾನ್ನಿಧ್ಯದಲ್ಲಿ ಪ್ರಸಾದ ದ್ವೈಮಾಸಿಕ ಲೇಖನ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು







ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಶಿಕ್ಷಕ ಅಭಿವಿನ್ಯಾಸ ಕಾರ್ಯಕ್ರಮವನ್ನು ಪ್ರೊ. ಎಸ್.ಎನ್. ಹೆಗಡೆಯವರು ಉದ್ಘಾಟಿಸಿದರು. ಚಿತ್ರದಲ್ಲಿ ಡಾ. ಕುಮುದಿನಿ ಅಚ್ಚಿ, ಪ್ರೊ. ಎಂ. ಮಹದೇವಪ್ಪ, ಪ್ರೊ. ಬಿ.ವಿ. ಸಾಂಬಶಿವಯ್ಯ, ಡಾ. ಸಿ.ಜಿ. ಬೆಟಸೂರಮಠ, ಪ್ರೊ. ಮೊರಬದ ಮಲ್ಲಿಕಾರ್ಜುನ ಮತ್ತು ಶ್ರೀ ಬಿ. ನಿರಂಜನಮೂರ್ತಿ




ರಾಷ್ಟ್ರೀಯ ಏಕತಾ ದಿನಾಚರಣೆ ಅಂಗವಾಗಿ ಬೆಂಗಳೂರಿನ ಎಚ್‌ಬಿಆರ್ ಬಡಾವಣೆಯಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಏರ್ಪಡಿಸಿದ್ದ ಏಕತಾ ಓಟದಲ್ಲಿ ವಿದ್ಯಾರ್ಥಿಗಳು

Registered with the Registrar of Newspapers for India No. KARBIL/2014/66470
'JSS Varthapathra' Monthly, Vol. 4, Issue No. 23 November 2019




ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯ ದಶಮ ಘಟಿಕೋತ್ಸವದಲ್ಲಿ ಸನ್ಮಾನ್ಯ ಉಪರಾಷ್ಟ್ರಪತಿಗಳಾದ ಶ್ರೀ ಎಂ. ವೆಂಕಯ್ಯನಾಯ್ಡುರವರನ್ನು ಪರಮಪೂಜ್ಯ ಜಗದ್ಗುರುಗಳು ಸ್ಮರಣಿಕೆ ನೀಡಿ ಆಶೀರ್ವದಿಸುತ್ತಿರುವುದು. ಚಿತ್ರದಲ್ಲಿ ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಶ್ರೀ ವಿ. ಸೋಮಣ್ಣ, ಶ್ರೀ ಶಿವರಾಜ್ ಪಾಟೀಲ್ ಮತ್ತು ಡಾ. ಬಸವನಗೌಡಪ್ಪನವರು




ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 104ನೆಯ ಜಯಂತಿ ಮಹೋತ್ಸವದ ಅಂಗವಾಗಿ ನಡೆದ ನಿವೃತ್ತರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪರಮಪೂಜ್ಯ ಶ್ರೀಗಳ ಜೊತೆ ಜೆಎಸ್‌ಎಸ್ ಸಂಸ್ಥೆಗಳ ನಿವೃತ್ತ ಬಂಧುಗಳು

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821-2548212 Extn. 223 * e-mail: jssmasapatrike@gmail.com * website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು **ಬಿಡಿ ಪ್ರತಿ 10 ರೂ.**